# 10ನೇ ತರಗತಿ ಅರ್ಧ ವಾರ್ಷಿಕ ಪರೀಕ್ಷೆ, ಸೆಪ್ಟೆಂಬರ್-2019

ಸಮಯ : 3.00 ಗಂಟೆ | ವಿಷಯ : ಪ್ರಥಮ ಭಾಷೆ ಕನ್ನಡ | ಗರಿಷ್ಠ ಅಂಕಗಳು : 100

---

**I ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ:** **6x1=6**

1. 'ಮಹರ್ಷಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ:
   ಎ) ಸವರ್ಣದೀರ್ಘಸಂಧಿ ಬಿ) ಗುಣಸಂಧಿ ಸಿ) ವೃದ್ಧಿಸಂದಿ ಡಿ) ಯಣ್‌ಸಂಧಿ
2. ಒಬ್ಬರು ಹೇಳಿದ ಮಾತನ್ನೇ ಯಥಾವತ್ತಾಗಿ ಬರೆಯುವಾಗ ಈ ಚಿಹ್ನೆಯನ್ನು ಬಳಸಲಾಗುವುದು:
   ಎ) ವಾಕ್ಯವೇಷ್ಠನ ಚಿಹ್ನೆ ಬಿ) ವಿವರಣಾತ್ಮಕ ಚಿಹ್ನೆ ಸಿ) ಆವರಣ ಚಿಹ್ನೆ ಡಿ) ಉದ್ಧರಣ ಚಿಹ್ನೆ
3. 'ಪಂಚಮೀ' ವಿಭಕ್ತಿ ಪ್ರತ್ಯಯದ ಕಾರಕಾರ್ಥ :
   ಎ) ಸಂಬಂಧ ಬಿ) ಅಧಿಕರಣ ಸಿ) ಅಪಾದಾನ ಡಿ) ಸಂಪ್ರದಾನ
4. ಕರ್ತೃಪದ ಅಥವಾ ಕರ್ಮಪದ ಅಥವಾ ಕ್ರಿಯಾಪದಗಳು ಇಲ್ಲದೆಯೂ ವಾಕ್ಯ ಪೂರ್ಣ ಅರ್ಥವನ್ನು ಕೊಡುವಂತಿದ್ದರೆ ಅಂತಹ ವಾಕ್ಯವನ್ನು ಹೀಗೆಂದು ಕರೆಯುತ್ತಾರೆ:
   ಎ) ಅಧ್ಯಾಹಾರಯುಕ್ತ ವಾಕ್ಯ ಬಿ) ಸಾಮಾನ್ಯ ವಾಕ್ಯ ಸಿ) ಸಂಯೋಜಿತ ವಾಕ್ಯ ಡಿ) ಮಿಶ್ರವಾಕ್ಯ
5. 'ಮಾಡು' ಧಾತುವಿನ ವಿಧ್ಯರ್ಥಕ ಕ್ರಿಯಾಪದ ರೂಪ :
   ಎ) ಮಾಡಲಿ ಬಿ) ಮಾಡದು ಸಿ) ಮಾಡನು ಡಿ) ಮಾಡಿಯಾನು
6. ಯಾವುದಾದರೊಂದು ಕ್ರಿಯೆ ನಡೆದ ರೀತಿಯನ್ನು ಹೇಳುವಂತಹ ಅವ್ಯಯಗಳೇ:
   ಎ) ಅನುಕರಣಾವ್ಯಯ ಬಿ) ಅವಧಾರಣಾರ್ಥಕಾವ್ಯಯ ಸಿ) ಕ್ರಿಯಾರ್ಥಕಾವ್ಯಯ ಡಿ) ಸಾಮಾನ್ಯಾವ್ಯಯ

**II ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ:** **4x1=4**

7. ಪುಸ್ತಕಗಿಸ್ತಕ : ಜೋಡುನುಡಿ : : ಮೊಟ್ಟಮೊದಲು :..................
8. ವರ್ತಮಾನ ಕಾಲ : ಉತ್ತ : : ಭೂತಕಾಲ :..............
9. ತಿಂಗಳ : ಚಂದ್ರ : : ಬೆಳ್ಳಿ :....................
10. ವೈಶಾಖ : ಬೇಸಗೆ : : ವಿದ್ಯಾಧರ :........................

**III ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ :** **7x1=7**

11. ಮುದುಕಿಯ ಸೊಸೆಯು ಯಾವ ಬೇನೆಯಿಂದ ನರಳುತ್ತಿದ್ದಳು?
12. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
13. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು?
14. 'ವೆಸ್ಟ್ ಮಿನ್‌ಸ್ಟರ್ ಅಬೆ'ಯಲ್ಲಿರುವ ಸಿಂಹಾಸನಕ್ಕೆ ಇರುವ ಹೆಸರೇನು?
15. ಶಿವರುದ್ರಪ್ಪ ಅವರು ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು ಎಂದಿದ್ದಾರೆ?
16. ಕವಿ ಬೇಂದ್ರೆ ಅವರು ಕಾಲದ ಗತಿಯನ್ನು ಯಾವುದರೊಂದಿಗೆ ಸಮೀಕರಿಸಿದ್ದಾರೆ?
17. ವಿವೇಕಾನಂದರಿಗೆ ಯಾವುದು ಮೊದಲ ಆದ್ಯತೆಯಾಗಿತ್ತು?

**IV ಕೆಳಗಿನ ಪ್ರಶ್ನೆಗಳಿಗೆ ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **10x2=20**

18. ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು?
19. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?
20. ವಿಶ್ವೇಶ್ವರಯ್ಯ ಅವರ ವಿದ್ಯಾಭ್ಯಾಸ ಎಲ್ಲೆಲ್ಲಿ ನಡೆಯಿತು?
21. ನಾಲ್ವಡಿ ಕೃಷ್ಣರಾಜ ಒಡೆಯರ್ ಸ್ಥಾಪಿಸಿದ 'ನ್ಯಾಯ ವಿಧಾಯಕ ಸಭೆ'ಯ ವಿಶೇಷತೆಯನ್ನು ತಿಳಿಸಿ.
22. ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು?
23. ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?
24. ಜಾತಿ ವ್ಯವಸ್ಥೆಯ ಬಗ್ಗೆ ವಿವೇಕಾನಂದರ ಅಭಿಪ್ರಾಯವೇನು?
25. ಮನುಷ್ಯತ್ವದ ಮಹಿಮೆಯನ್ನು ಕುರಿತು ವಿವೇಕಾನಂದರ ಅಭಿಪ್ರಾಯವನ್ನು ತಿಳಿಸಿ.

(ಪು.ತಿ.ನೋ)

26. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?

27. 'ವಸಂತ ಮುಖ ತೋರಲಿಲ್ಲ' ಕವನದಲ್ಲಿ ಪುಟ್ಟ ಪೋರಿಯ ಮನೆಯ ವಾತಾವರಣವನ್ನು ಕುರಿತು ಕವಯಿತ್ರಿ ವಿಜಯಶ್ರೀ ಸಬರದ ಹೇಗೆ ವರ್ಣಿಸಿದ್ದಾರೆ?

**V ಕೆಳಗಿನ ಕವಿಗಳ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ:** **2x3=6**

28. ಸಾರಾ ಅಬೂಬಕ್ಕರ್ 29. ದ.ರಾ. ಬೇಂದ್ರೆ

**VI ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ:** **1x3=3**

30. ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ

**VII ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ:** **1x3=3**

31. "ಲಂಡನ್ ಪಟ್ಟಣದ 'ವೂಲವರ್ಥ' 'ಸ್ಟೇಷನರಿ' ಅಂಗಡಿಯು ಪ್ರಾಚೀನ ಮಹಾಕಾವ್ಯದಂತೆ ಮಹಾಕೋಶವಾಗಿದೆ"

**VIII ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ:** **1x3=3**

32. ಮಾತೇ ಮುತ್ತು, ಮಾತೇ ಮೃತ್ಯು *ಅಥವಾ* ತುಂಬಿದ ಕೊಡ ತುಳುಕುವುದಿಲ್ಲ

**IX ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ:** **6x3=18**

33. "ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ?"
34. "ಹೊತ್ತು! ಹೊತ್ತು! ಹೊತ್ತೇ ಹಣ"
35. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ"
36. "ಹೊಸ ಭರವಸೆಗಳ ಕಟ್ಟೋಣ"
37. "ಸೂರ್ಯ-ಚಂದ್ರರನು ಮಾಡಿದೆ ಕಣ್ಣಾ"
38. "ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ"

**X ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ:** **1x4=4**

39. ಕಲುಷಿತವಾದೀ.............................. *ಅಥವಾ* ಮತಗಳೆಲ್ಲವೂ..................................
.............................................
.............................................
............................ ಮುಟ್ಟೋಣ

.....................................................
.....................................................
........................................ ಜಿತ್ತೋಣ

**XI ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ:** **1x4=4**

40. ವಿಲಾತಿಯಿಂದ ಹುಕುಮ ಕಳಿಸಿತು ಕುಂಪಣಿ ಸರಕಾರ
ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ
ಹಲಗರಹಳ್ಳಿ ಮುಧೋಳ ಹತ್ತರ ಮೆರೆಯಿತೊ ಸುತ್ತಮುತ್ತ
ಪೂಜೇರಿ ಹನುಮಾ ಬ್ಯಾಡರ ಬಾಲ ಜಡಗರಾಮ ಮಸಲತ್ತ
ಕೈಯಾನ ಹತಾರ ಕೊಡಬಾರದೊ, ನಾವು ನಾಲ್ಕು ಮಂದಿ ಜತ್ತ
ಹತಾರ ಹೋದಿಂದ ಬಾರದು ಜೀವ ಸತ್ತು ಹೋಗುವುದು ಗೊತ್ತ
ಹೊಡಿರಿ ಜಗಳ ಕೂಡಿ ತೀರ್ತೇವು ಕುಮಕಿ ನಮ್ಮ ದ್ಯಾವತ್ತ
ಒಳಗಿಂದೊಳಗ ವಚನ ಕೊಟ್ಟರೊ ಬ್ಯಾಡರೆಲ್ಲ ಕಲ್ತ.

**XII ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **2x4=8**

41. ಮತಂಗಾಶ್ರಮದ ಬಳಿ ರಾಮಲಕ್ಷ್ಮಣರು ಸೀತೆಯನ್ನು ನೆನೆದು ದುಃಖಿಸಿದ ಪರಿ ಮತ್ತು ಪರಸ್ಪರ ಮಾಡಿಕೊಂಡ ಸಮಾಧಾನದ ಮಾತುಗಳನ್ನು ಸಂಗ್ರಹಿಸಿ ಬರೆಯಿರಿ.

*ಅಥವಾ*

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

42. ಶ್ರೀಕೃಷ್ಣನು ಕರ್ಣನಿಗೆ ಜನ್ಮ ರಹಸ್ಯವನ್ನು ತಿಳಿಸಿ ಒಡ್ಡಿದ ಆಮಿಷಗಳೇನು?

*ಅಥವಾ*

ಪಾಂಡವರು ಸೋದರರೆಂದು ತಿಳಿಸಿ ಆಮಿಷ ಒಡ್ಡಿದ ಶ್ರೀಕೃಷ್ಣನಿಗೆ ಕರ್ಣನ ಪ್ರತ್ಯುತ್ತರ ಏನೆಂಬುದನ್ನು ವಿವರಿಸಿ.

**XIII ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ:** **1x4=4 (2+2)**

43. ಗದಾಧರನು ಬಂಗಾಲ ಪ್ರಾಂತದ ಹೂಗ್ಲಿ ಜಿಲ್ಲೆಯಲ್ಲಿನ ಕಾಮಾರ ಪುಕುರ ಎಂಬ ಸಣ್ಣ ಹಳ್ಳಿಯಲ್ಲಿ ಖುದಿರಾಮ ಮತ್ತು ಚಂದ್ರಮಣಿದೇವಿ ಇವರ ಮಗನಾಗಿ ಹುಟ್ಟಿದನು. ಕ್ರಿ.ಶ. 1836 ಫೆಬ್ರವರಿ 18ನೆಯ ದಿನಾಂಕದ ಪಾಲ್ಗುಣ ಮಾಸದಲ್ಲಿ, ಹುಲ್ಲು ಜೋಪಡಿಯ ಮನೆಯಲ್ಲಿ, ಜನ್ಮವನ್ನು ಎತ್ತಿದನು. ಜೋಯಿಸರು ಬಂದು, ಜನ್ಮ ಕುಂಡಲಿಯನ್ನು ಬರೆದು, "ಇಂಥವನು ಧರ್ಮವೇತ್ತನೂ, ಮಹನೀಯನೂ ಆಗುವನು, ಬಹುಶಿಷ್ಯ ಪರಿವೃತನಾಗಿ, ದೇವ ಮಂದಿರದಲ್ಲಿ ವಾಸ ಮಾಡುವನು. ನಾರಾಯಣಾಂಶ ಸಂಭೂತನಾದ ಮಹಾಪುರುಷನೆಂದು ಪೂಜಿತನಾಗುವನು" ಎಂದು ಭವಿಷ್ಯವನ್ನು ಹೇಳಿದರು. ಅನಂತರ ಜಾತಕರ್ಮವನ್ನು ನೇರವೇರಿಸಿ, ಶಿಶುವಿಗೆ 'ಗದಾಧರ' ಎಂದು ನಾಮಕರಣ ಮಾಡಿದರು. ಒಮ್ಮೆ ತಾಯಿ ಚಂದ್ರಮಣಿ ದೇವಿಯು ಶಿಶುವನ್ನು ಎತ್ತಿಕೊಳ್ಳಲು ಹೋಗಿ, ತುಂಬಾ ಭಾರ ಎನಿಸಿ, ಎತ್ತಿಕೊಳ್ಳಲಾರದೆ ಗಂಡನನ್ನು ಕರೆದಳು. ಆದರೆ ಬಂದು ಮತ್ತೆ ಎತ್ತಿಕೊಂಡಾಗ ಹೂವಿನಂತೆ ಹಗುರವಾಗಿತ್ತು. ಇನ್ನೊಮ್ಮೆ ಗದಾಧರನು ಎಂಟು ತಿಂಗಳ ಮಗುವಾಗಿದ್ದಾಗ ಹಾಸಿಗೆಯ ಮೇಲೆ ಮಲಗಿಸಿದ್ದ ಕಂದನಿಗೆ ಬದಲಾಗಿ, ತೇಜಸ್ವಿಯಾದ ದೊಡ್ಡ ಮನುಷ್ಯನು ಇದ್ದುದ್ದನ್ನು ಕಂಡು ತಾಯಿ ಕಿಟ್ಟನೆ ಕಿರುಚಿದಳು. ಪತಿಯು ಓಡಿಬಂದು ನೋಡಿದಾಗ ಮಗುವು ಮೊದಲಿನಂತೆಯೇ ಶಿಶುವಾಗಿ ಮಲಗಿತ್ತು. ಪತಿ ಖುದಿರಾಮನು ದೇವಾಂಶ ಶಿಶುವಿನ ವಿಚಾರದಲ್ಲಿ ಹೀಗೆಲ್ಲ ದಿವ್ಯಾನುಭವಗಳು ಆಗುವುದು ಸಹಜ. ಆತಂಕ ಬೇಡ ಎಂದು ಸತಿಗೆ ಸಮಾಧಾನವನ್ನು ಮಾಡಿದನು. ಈ ಅಸಾಮಾನ್ಯ ಗದಾಧರನೇ ಮುಂದೆ "ಶ್ರೀರಾಮಕೃಷ್ಣ ಪರಮಹಂಸ" ಎಂದು ಲೋಕಪ್ರಸಿದ್ಧನಾದನು.

*ಪ್ರಶ್ನೆಗಳು:*

43. ಅ) ಗದಾಧರನ ಬಗ್ಗೆ ಜೋಯಿಸರು ಏನೆಂದು ಭವಿಷ್ಯ ನುಡಿದರು?

43. ಆ) ತಾಯಿ ಚಂದ್ರಮಣಿ ದೇವಿಗೆ ಮಗ ಗದಾಧರನ ವಿಷಯದಲ್ಲಿ ಆದ ದಿವ್ಯಾನುಭವಗಳೇನು?

**XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ:** **1x5=5**

44. ನಿಮ್ಮನ್ನು ದಾವಣಗೆರೆಯ ಸುಭಾಷ್‌ನಗರದ ಸರ್ಕಾರಿ ಪ್ರೌಢಶಾಲೆಯ 'ಪ್ರಕೃತಿ' ಎಂದು ಭಾವಿಸಿಕೊಂಡು, ಮಂಡ್ಯದ ಗಾಂಧಿನಗರದಲ್ಲಿರುವ 'ವನಿತ' ಎಂಬ ಹೆಸರಿನ ನಿಮ್ಮ ತಾಯಿಗೆ ನಿಮ್ಮ ಶಾಲೆಯಲ್ಲಿ ನಡೆದ ಹೋಬಳಿ ಮಟ್ಟದ "ಪ್ರತಿಭಾ ಕಾರಂಜಿ" ಕಾರ್ಯಕ್ರಮ ಕುರಿತು ಪತ್ರವೊಂದನ್ನು ಬರೆಯಿರಿ.

*ಅಥವಾ*

ನಿಮ್ಮನ್ನು ಮಡಕೇರಿಯ ಕಾವೇರಿ ನಗರದ ನಿವಾಸಿ 'ರಾಹುಲ್' ಎಂದು ಭಾವಿಸಿಕೊಂಡು, ನಿಮ್ಮ ಪ್ರದೇಶದಲ್ಲಿ ಜಲಪ್ರಳಯದಿಂದ ಉಂಟಾಗಿರುವ ತೊಂದರೆಯನ್ನು ವಿವರಿಸಿ ಜಿಲ್ಲಾಧಿಕಾರಿಗಳಿಗೆ ಪರಿಹಾರ ಕಾರ್ಯಕೈಗೊಳ್ಳಲು ವಿನಂತಿಸಿ ಒಂದು ಮನವಿ ಪತ್ರವೊಂದನ್ನು ಬರೆಯಿರಿ.

**XV ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ:** **1x5=5**

45. ಸ್ವಚ್ಛ ಭಾರತ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪಾತ್ರ

*ಅಥವಾ*

ಅಂತರ್ಜಲ ಮರು ಪೂರಣಕ್ಕೆ ಕೈಗೊಳ್ಳಬೇಕಾದ ಕ್ರಮಗಳು